


# ದುಬಾರಿ ಕಾಫಿ

**ಕಾಡು ಬೆಕ್ಕಿನ ಮಲದಿಂದ ಬೇರ್ಪಡಿಸುವ ಇಂಡೋನೇಷ್ಯದ 'ಕೊಫಿ ಲುವಾಕ್' ಜಗತ್ತಿನಲ್ಲೇ ಅತ್ಯಂತ ದುಬಾರಿ ಕಾಫಿ!**

**■ ಡಾ. ಅರುಣ್ ಇಸ್ಲೂರ್**

ದಕ್ಷಿಣ ಸುಮಾತ್ರ ಪ್ರಾಂತ್ಯದ ರಾಜಧಾನಿ ಹಾಗೂ ಎರಡನೇ ಅತೀ ದೊಡ್ಡ ನಗರವಾಗಿರುವ ಪಾಲೆಂಭಾಂಗ್ ಮುಸಿ ನದಿ ತಟದಲ್ಲಿರುವ ಪುರಾತನ ಬಂದರು ನಗರಿ. ಏಳನೇ ಶತಮಾನದಲ್ಲಿ ಹಿಂದೂಗಳ ಪ್ರಾಬಲ್ಯ ಹೊಂದಿರುವ ಈ ನಗರಿ, ಶ್ರೀ ವಿಜಯ ಎಂಬ ರಾಜನ ರಾಜಧಾನಿಯಾಗಿ ಖ್ಯಾತಿ ಹೊಂದಿತ್ತು. ಮುಂದಿನ ವರ್ಷ ಇಲ್ಲಿ ಏಷ್ಯದ ಕ್ರೀಡಾಕೂಟ ನಡೆಯಲಿದೆ. ನಗರ ಸೌಂದರ್ಯ ವೃದ್ಧಿ ಕೆಲಸಗಳೂ ಭರದಿಂದ ಸಾಗುತ್ತಿವೆ. ಕೌಲಾಲಂಪೂರದಿಂದ ಕೇವಲ 70 ನಿಮಿಷ ವಿಮಾನ ಪಯಣದ ಬಳಿಕ, ಸುಲ್ತಾನ್ ಮೊಹಮ್ಮದ್ ಬದ್ರುದ್ದೀನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿದ ನನಗೆ ಸ್ವಾಗತ ನೀಡಿದವರು ಡಾ. ಏರ್ನಾ ಯಲುವತಿ, ಇಫಾ ಹಾಗೂ ಈವಾ,

ನಾವು ಕಾರಿನಲ್ಲಿ ಸಾಗುತ್ತಿದ್ದಾಗ ಡಾ. ಏರ್ನಾ, ಅಲ್ಲಿಯ ಒಂದು ಖ್ಯಾತ ಫಲಹಾರ ಮಂದಿರಕ್ಕೆ ಕರೆದೊಯ್ದರು. ಸ್ಥಳೀಯ ಕೆಲವು ವಿಶೇಷ ತಿಂಡಿಗಳನ್ನು ತರಲು ಹೇಳಿದ ಬಳಿಕ 'ಕೊಫಿ ಲುವಾಕ್ ಕುಡಿಯುತ್ತೀರಾ?' ಎಂದು ಕೇಳಿದರು. ಸಾಮಾನ್ಯವಾಗಿ ಮಲೇಷ್ಯ, ಇಂಡೊನೇಷ್ಯಗಳಲ್ಲಿ ನಮ್ಮ ಕಾಫಿಗೆ 'ಕೊಫಿ' ಎನ್ನುವುದು ನನಗೆ ಗೊತ್ತಿತ್ತು. ಆದರೆ 'ಕೊಫಿ ಲುವಾಕ್' ಏನಿದು? ಕುತೂಹಲದಿಂದ ವಿಚಾರಿಸಿದರೆ ನಮ್ಮ ತಿಂಡಿ ತಿಂದ ಬಳಿಕ ಉತ್ತರಿಸುವುದಾಗಿ ಹೇಳಿದರು. ಮೆನು ಕಾರ್ಡ್‌ನಲ್ಲಿ ಇದರ ದರ ಸಾಮಾನ್ಯ ಕಾಫಿಗಿಂತಲೂ ನಾಲ್ಕು ಪಟ್ಟು ಹೆಚ್ಚು ಇರುವುದನ್ನು ಗಮನಿಸಿದೆ. ಸ್ವಲ್ಪವೇ ಹೊತ್ತಿನಲ್ಲಿ ನಮ್ಮ ಟೇಬಲ್‌ನ ಮೇಲೆ ವಿಶೇಷ ರೀತಿಯಲ್ಲಿ ಘಮ ಘಮಿಸುವ 'ಕೊಫಿ ಲುವಾಕ್'